# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ. 511/2017

ಸಿಡಬ್ಲ್ಯೂ-6 ಪಿಡಬ್ಲ್ಯೂ-1

| | | |
|---|---|---|
| ಹೆಸರು | : | ಡಾ. ವಿಜಯಲಕ್ಷ್ಮೀ |
| ಗಂಡನ ಹೆಸರು | : | ಡಾ. ಶ್ರೀಕಾಂತರೆಡ್ಡಿ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ವೈದ್ಯಾಧಿಕಾರಿಗಳು |
| ವಾಸ ಸ್ಥಳ | : | ಯಾದಗಿರಿ |

ದಿನಾಂಕ 16-07-2024

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ**

ನಾನು ಸೇಡಂ ಸರಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ ಅಂತಾ 2016 ರಿಂದ 2018 ರವರೆಗೆ ಸೇವೆ ಸಲ್ಲಿಸಿರುತ್ತೇನೆ. ಈ ಅವಧಿಯಲ್ಲಿ ದಿಃ 20.03.2017 ರಂದು ಸುಮಾರು 05.00 ಗಂಟೆಗೆ ಪಿಂಕಿ ಎನ್ನುವವರು ಅವರ ತಾಯಿಯ ಜೊತೆ ನಮ್ಮ ಆಸ್ಪತ್ರೆಗೆ ಹಲ್ಲೆಯ ಹಿನ್ನಲೆಯಲ್ಲಿ ಚಿಕಿತ್ಸೆಗೆಂದು ಬಂದಿದ್ದು ಅವಳನ್ನು ಪರೀಕ್ಷಿಸಲಾಗಿ ಈ ಕೆಳಕಂಡ ಗಾಯಗಳು ಕಂಡುಬಂದಿರುತ್ತವೆ.

1. ಎಡಗಾಲಿಗೆ 3x5 cm ಅಷ್ಟ ಊತ ಗಾಯ ಆಗಿತ್ತು. ಅದು ಸಾಮಾನ್ಯ ಸ್ವರೂಪದ ಗಾಯ ಆಗಿತ್ತು. ಗಾಯವು ತಾಜಾ ಸ್ವರೂಪದ್ದು ಇತ್ತು.

ನನ್ನ ಅಭಿಪ್ರಾಯದಂತೆ ಮೇಲ್ಕಂಡ ಗಾಯಗಳು ಅವದಿ 6 ಗಂಟೆ ಒಳಗೆ ಗಾಯ ಆಗಿತ್ತು. ಅದು ಊತ ಗಾಯ ಆಗಿರುವುದರಿಂದ ಯಾವುದರಿಂದ ಹೊಡೆದಿರುತ್ತಾರೆ ಎಂದು ಹೇಳಲು ಬರುವುದಿಲ್ಲ. ಈ ಕುರಿತು ನಾನು ತನಿಖಾಧಿಕಾರಿಗಳಿಗೆ ದಿನಾಂಕ 30.03.2017 ರಂದು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ, ಗಾಯದ ಪ್ರಮಾಣ ಪತ್ರವನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಬಿ. ಎಸ್. ಡಿ. ಆರೋಪಿ ಪರ ವಕೀಲರಿಂದ**

ಒಬ್ಬ ವ್ಯಕ್ತಿ ನಡೆದುಕೊಂಡು ಹೋಗುವಾಗ ಬಿದ್ದರು ನಿಪಿ-1 ರಲ್ಲಿ ನಮೂದಿಸಿದ ಗಾಯ ಆಗುವ ಸಾಧ್ಯತೆ ಇರುತ್ತವೆ ಎಂದರೆ ಸರಿ. ಊತ ಗಾಯ ಆಗಿರುವುದರಿಂದ ತುಂಬಾ ಹೊತ್ತು ಹಾಗೇ ಬಿಟ್ಟರೆ ರಕ್ತ ಹೆಪ್ಪುಗಟಿ ಗಾಯ ಹೆಚ್ಚಾಗುತ್ತದೆ ಎಂದರೆ ಸರಿ. ನಾನು ಗಾಯಾಳುವನ್ನು ಪರೀಕ್ಷಿಸಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳ ಮಾತುಕೇಳಿ ನಿಪಿ-1 ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ. ದಂ. ಸೇಡಂ.

*SYH